<u>**ಪ್ರಥಮ ದರ್ಜೆ  ನ್ಯಾಯಿಕ ದಂಡಾಧಿಕಾರಿಗಳು, 3ನೇ ನ್ಯಾಯಾಲಯ, ಬೆಳಗಾವಿ**</u>

**ಸಿ. ಸಿ. ನಂ  :1594/2022**
ಚಾಸಾ : 01        ಪ್ರಾಸಾ : 04
ಪ್ರಮಾಣಿಕರಿಸಿದ ದಿನಾಂಕ : 09-12-2024

| | | |
|---|---|---|
| ಹೆಸರು | : | ಮಂಜುನಾಥ ಚಂದ್ರಶೇಖರ ಗಲಗಲಿ |
| ತಂದೆಯ ಹೆಸರು | : | ಚಂದ್ರಶೇಖರ ಗಲಗಲಿ |
| ವಯಸ್ಸು | : | **35** ವರ್ಷ |
| ಉದ್ಯೋಗ | : | ಅಬಕಾರಿ  ನೀರಿಕ್ಷಕರು **,** ಅಬಕಾರಿ ಆಯುಕ್ತರ ಕಚೇರಿ ಬೆಂಗಳೂರು |
| ವಾಸ | : | ಬೆಂಗಳೂರು **.** |

<u>**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ಅವರಿಂದಃ**</u>

**ನಾನು ನವೆಂಬರ 2020 ರಿಂದ ಸೆಪ್ಟೆಂಬರ 2024 ರವರೆಗೆ  ನಾನು ಅಬಕಾರಿ  ನೀರಿಕ್ಷಕರಾಗಿ ಉಪ ವಿಭಾಗ ಬೆಳಗಾವಿಯಲ್ಲಿ  ಕಾರ್ಯನಿರ್ವಹಿಸಿದ್ದೇನೆ .**

ದಿನಾಂಕ **09-06-2022** ರಂದು ನಾನು ಮತ್ತು ಸಿಬ್ಬಂದಿಗಳು ಕಚೇರಿಯಲ್ಲಿದ್ದಾಗ ಸಿಬ್ಬಂದಿಗಳಿಗೆ ಇಬ್ಬರು ವ್ಯಕ್ತಿಗಳನ್ನು ಪಂಚರನ್ನಾಗಿ ಕೆರದುಕೊಂಡು ಬರಲು ತಿಳಿಸಿರುತ್ತೇನೆ **.** ಸದರಿ ರವರು ಚಾಸಾ **2** ಮತ್ತು **3** ರವರನ್ನು ಕರೆದುಕೊಂಡು ಬಂದಿದ್ದು ನಾನು ಅವರಿಗೆ ಗಸ್ತು ಕರ್ತವ್ಯಕ್ಕೆ ಹೋಗಬೇಕಾಗಿರುತ್ತದೆ ಅಲ್ಲಿ ಯಾವುದಾದರೂ ಅಬಕಾರಿ ಪ್ರಕರಣಗಳು ಕಂಡು ಬಂದರೆ ದಾಳಿ ಮಾಡಿದ ಸಮಯದಲ್ಲಿ ಪಂಚರಾಗಿ ಹಾಜರಾಗಲು ಕೇಳಿಕೊಂಡಿರುತ್ತಾರೆ**.** ನಂತರ ನಾನು ನಮ್ಮ ಸಿಬ್ಬಂದಿಗಳು ಸಮವಸ್ತ್ರದಲ್ಲಿ ಮತ್ತು ಚಾಸಾ **2** ಮತ್ತು **3** ರವರ ಜೊತೆ ಗಸ್ತು ಕರ್ತವ್ಯಕ್ಕೆ ತಯಾರಾಗಿ ನಮ್ಮ ಇಲಾಖಾ ಜೀಪ ನಂಬರ ಕೆಎ**-01-**ಜಿ**-6211** ನೇದ್ದರಲ್ಲಿ ಗಸ್ತು ಕರ್ತವ್ಯಕ್ಕೆ ಸಾಂಬ್ರಾ ಮಾರ್ಗವಾಗಿ ಕರಡಿಗುದ್ದಿ ಗ್ರಾಮದ ವಾಲ್ಮೀಕಿ ನಗರಕ್ಕೆ ಹೋಗಿ ಅಲ್ಲಿರುವ ಪ್ರತಿಯೊಂದು ಮನೆಗಳನ್ನು ತಾಪಸಣೆ ಮಾಡಲು ಶುರು ಮಾಡಿದೆವು**.** ಆಗ ಒಂದು ಮನೆಯಿಂದ ಒಬ್ಬ ವ್ಯಕ್ತಿ ಓಡಿ ಹೋಗಿರುವುದು ಸಂಶಯ ಬಂದಿತು**.** ಸದರಿ ಮನೆಯ ಹತ್ತಿರ ಹೋಗಿ ಕೂಗಲಾಗಿ ಯಾರು ಉತ್ತರ ನೀಡಲಿಲ್ಲ**.** ಸದರಿ ಮನೆಯನ್ನು ತಪಾಸಣೆ ಮಾಡಲು ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರಂಟನ್ನು ಪಡೆದುಕೊಳ್ಳಲು ಸಮಯಾವಕಾಶ ಇಲ್ಲದ ಕಾರಣ ಸ್ಥಳದಲ್ಲಿಯೇ ಕರ್ನಾಟಕ ಅಬಕಾರಿ ಕಾಯಿದೆ ಕಲಂ **54** ರಡಿಯಲ್ಲಿ ಶೋಧನಾ ಸಮುಚ್ಚಿತ ಪತ್ರವನ್ನು ತಯಾರಿಸಿ**,** ಪಂಚರ ಸಮಕ್ಷಮ ಸದರಿ ಮನೆಯನ್ನು ಶೋದನೆ ಮಾಡಿದೇವು**.** ಸದರಿ ಮನೆಯಲ್ಲಿ ಮೊದಲು ಪಡಸಾಲೆ ಇದ್ದು**,** ಎರಡನೆಯದಾಗಿ ಮಲಗುವ ಕೋಣೆ ಇತ್ತು**.** ಸದರಿ ಕೋಣೆಯ

ಬಲಭಾಜು ಒಂದು ಮಂಚ ಇದ್ದು, ಅದರ ಕೆಳಗಡೆ ಕಪ್ಪು ಬಣ್ಣದ ರಬ್ಬರ ಟ್ಯೂಬ ಇರುವುದು ಕಂಡು ಬಂದಿತು. ಸದರಿ ರಬ್ಬರ ಟ್ಯೂಬನ್ನು ಪಂಚರ ಸಮಕ್ಷಮ ಹೊರಗಡೆ ತೆಗೆದು ನೋಡಲಾಗಿ, ಅದು ಗಾಟು ವಾಸನೆ ಬಂದಿದ್ದು, ಅದು ಕಳ್ಳ ಭಟ್ಟಿ ಸಾರಾಯಿ ಎಂದು ಖಚಿತ ಪಡಿಸಿಕೊಂಡೆವು. **3** ನೇ ಕೋಣೆಯು ಅಡುಗೆ ಮನೆಯಿದ್ದು ಅಲ್ಲಿ ಒಂದು ಚೀಟಿ ಸಿಕ್ಕಿದ್ದು, ಅದನ್ನು ನೋಡಲಾಗಿ, ಅದು ಆಧಾರ ಕಾರ್ಡ ಜೆರಾಕ್ಸ ಇತ್ತು. ಅದರಲ್ಲಿ ಲಕ್ಷ್ಮೀಭಾಯಿ ಅರಬಳ್ಳಿಯವರ ಆಧಾರ ಕಾರ್ಡನ ಪತಿ ಇತ್ತು. ಅದನ್ನು ಖಚಿತಪಡಿಸಿಕೊಳ್ಳಲು ಸದರಿ ಮನೆಯ ಅಕ್ಕ ಪಕ್ಕ ವಿಚಾರಣೆ ಮಾಡಿದಾಗ, ಸದರಿ ಮನೆಯಲ್ಲಿ ಲಕ್ಷ್ಮೀಭಾಯಿ ಅರಬಳ್ಳಿ ಇರುತ್ತಾರೆ ಮತ್ತು ಓಡಿ ಹೋದ ವ್ಯಕ್ತಿ ಆಕೆಯೇ ಎಂದು ತಿಳಿಸಿದರು. ಸ್ಥಳೀಯರನ್ನು ಪಂಚರಾಗಲು ಕೇಳಿಕೊಂಡೆನು ಆದರೆ ಒಪ್ಪಲಿಲ್ಲ. ನಂತರ ಸದರಿ ಕಪ್ಪು ಬಣ್ಣದ ರಬ್ಬರ ಟ್ಯೂಬನ್ನು ಪಂಚ ಸಮಕ್ಷಮ ಜಪ್ತಪಡಿಸಿಕೊಂಡಿದ್ದು, ಅದರಲ್ಲಿ ಅಂದಾಜು 30 ಲೀಟರನಷ್ಟು ಕಳ್ಳ ಭಟ್ಟಿ ಸಾರಾಯಿ ಇರುವುದು ಕಂಡು ಬಂದಿತು.

ನಂತರ ಸದರಿ ಜಪ್ತು ಮಾಡಿಕೊಂಡ ಮು. ಮಾಲಿನಿಂದ **01** ಲೀಟರಿನ **01** ಪ್ಲಾಸ್ಟಿಕ ಬಾಟಲಿಯಲ್ಲಿ ಕಳ್ಳಭಟ್ಟಿ ಸಾರಾಯಿಯನ್ನು ರಸಾಯನಿಕ ಪರೀಕ್ಷೆಗಾಗಿ ತೆಗೆದಿರಿಸಿಡಲಾಯಿತು. ಸದರಿ ಬಾಟಲಿಗೆ ಅರಿವೆಯಿಂದ ಸುತ್ತಿ ದಾರವನ್ನು ಕಟ್ಟಿ, ಸರಕಾರದ ಸೀಲನ್ನು ಮಾಡಲಾಯಿತು. ನಂತರ ನಮ್ಮ ಹಾಗೂ ಪಂಚರ ಸಹಿವೂಳ್ಳ ಚೀಟಿಯನ್ನು ಅಂಟಿಸಿಡಲಾಯಿತು. ಸ್ಥಳದಲ್ಲಿ ಮಾದರಿ ಸೀಲನ್ನು ತಯಾರಿಸಲಾಯಿತು. ಸದರಿ ಸ್ಥಳದಲ್ಲಿಯೇ ಪಂಚನಾಮೆಯನ್ನು ರಾತ್ರಿ **08.30** ರಿಂದ **09.30** ಗಂಟೆವರೆಗೆ ಪಂಚರ ಸಮಕ್ಷಮ ಜರುಗಿಸಿ, ಅವರಿಗೆ ಓದಿ ಅವರ ಸಹಿಗಳನ್ನು ಪಡೆದಿರುತ್ತೇನೆ .

ನಂತರ ಜಪ್ತಾದ ಮಾಲುಗಳನ್ನು, ಶ್ಯಾಂಪಲಗಾಗಿ ಕಾಯಿದಿರಿಸಿದ ಬಾಟಲಿಗಳನ್ನು ಮತ್ತು ಪಂಚನಾಮೆಯನ್ನು ತೆಗೆದುಕೊಂಡು ಠಾಣೆಗೆ ವಾಪಸ್ಸು ಬಂದು ಸರಕಾರದ ತರ್ಪೆ ದೂರನ್ನು ಆರೋಪಿತಳ ವಿರುದ್ದ ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಪ್ರ. ವ. ವರದಿಯನ್ನು ಸಲ್ಲಿಸಿರುತ್ತೇನೆ . ಸದರಿ ಮು. ಮಾ . ಗಳ ಕುರಿತು ಸ್ವತ್ತಿನ ಪಟ್ಟಿಯನ್ನು ಅಬಕಾರಿ ಉಪ ಆಯುಕ್ತಕರಿಗೆ ಸಲ್ಲಿಸಿರುತ್ತೇನೆ . ನಂತರ ಪ್ರಕರಣದ ಕಡತಗಳನ್ನು ಮುಂದಿನ ತನಿಖೆಗಾಗಿ ಚಾಸಾ**-7** ರವರಿಗೆ ಹಸ್ತಾಂತರಿಸಿರುತ್ತೇನೆ .

ಈಗ ಸಾಕ್ಷಿಗೆ ಶೋಧನಾ ಸಮುಚ್ಚಿತ ಪತ್ರವನ್ನು ತೋರಿಸಲಾಗಿ, ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ- **4** ಎಂದು ಗುರುತಿಸಿ, ಸಾಕ್ಷಿಯ ಸಹಿಯನ್ನು ನಿ.ಪಿ- **4(**ಎ**)** ಎಂದು ಗುರುತಿಸಲಾಯಿತು .

ಈಗ ಸಾಕ್ಷಿಗೆ ದಾಳಿ ಪಂಚನಾಮೆಯನ್ನು ತೋರಿಸಲಾಗಿ, ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ**-1** ಎಂದು ಗುರುತಿಸಿಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ**- 1(**ಸಿ**)** ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ ಮಾದರಿ ಸಿಲ್ ನ್ನು ತೋರಿಸಲಾಗಿ, ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ**-5** ಎಂದು ಗುರುತಿಸಿ, ಸಾಕ್ಷಿಯ ಸಹಿಯನ್ನು ನಿ.ಪಿ**-5(**ಎ**)** ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ ಸರಕಾರದ ತರ್ಪೆ ಪಿರ್ಯಾದಿಯನ್ನು ತೋರಿಸಲಾಗಿ, ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ- 6 ಎಂದು ಗುರುತಿಸಿ, ಸಾಕ್ಷಿಯ ಸಹಿಯನ್ನು ನಿ.ಪಿ- 6(ಎ) ಎಂದು ಗುರುತಿಸಲಾಯಿತು
.

ಈಗ ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಲಾಗಿ, ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ- 7 ಎಂದು ಗುರುತಿಸಿ, ಸಾಕ್ಷಿಯ ಸಹಿಯನ್ನು ನಿ.ಪಿ- 7(ಎ) ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ **01** ಲೀಟರನ **01** ಪ್ಲಾಸ್ಟಿಕ ಶ್ಯಾಂಪಲ್ ಬಾಟಲಿಯನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು. ಮಾ. **1** ಎಂದು ಗುರುತಿಸಿ, ಅದರ ಮೇಲೆ ಅಂಟಿಸಿದ ಚೀಟಿಯ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮು . ಮಾ **1 (** ಎ **)** ಎಂದು ಗುರುತಿಸಲಾಯಿತು .

**ಈ ದಿನ ಆರೋಪಿತಳು ಗೈರ ಹಾಜರಿದ್ದು, ಆಕೆಯನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ.**

**<u>ಪಾಟೀ ಸವಾಲುಃ ಶ್ರೀ ಎ ಎಲ್ ಎಸ್ ಆರೋಪಿತಳ ಪರ ವಕೀಲರಿಂದಃ</u>**

ದಿನಾಂಕ 09-06-2022 ರಂದು ರಾತ್ರಿ 08.30 ಗಂಟೆ ಸಮಯದಲ್ಲಿ ದಾಳಿ ಮಾಡುವ ಪೂರ್ವ ಜಂಟಿ ಆಯುಕ್ತರ ಕಡೆಯಿಂದ ಲಿಖಿತ ಆದೇಶ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಲಿಖಿತ ಆದೇಶ ಪಡೆದುಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಲಿಖಿತ ಆದೇಶ ಪಡೆದುಕೊಳ್ಳುವುದು ಅಗತ್ಯ ಇರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಠಾಣೆಯಿಂದ ಆರೋಪಿತಳ ಮನೆ ಅಂದಾಜು 25-30 ಕೀ ಲೋ ಮೀಟರ ಅಂತರದಲ್ಲಿದೆ. ಬೆಳಗಾವಿ-ಬಾಗಲಕೋಟ ರಾಜ್ಯ ಹೆದ್ದಾರಿಯ ಪಕ್ಕ ಸದರಿ ಕರಡಿಗುದ್ದಿ ಗ್ರಾಮವು ಒಂದು ಕೀಲೋ ಮೀಟರ ಅಂತರದಲ್ಲಿ ಹತ್ತಿಕೊಂಡು ಇದೆ ಎಂದರೆ ಸರಿ. ಸದರಿ ಗ್ರಾಮದಿಂದ ಮಾರಿಹಾಳ ಪೊಲೀಸ ಠಾಣೆ ಅಂದಾಜು 2-3 ಕೀಲೋ ಮೀಟರ ಅಂತರದಲ್ಲಿದೆ. ಸದರಿ ರಸ್ತೆಯು ರಾಜ್ಯ

ಹೆದ್ದಾರಿ ಇರುವುದಂದ ಪೊಲೀಸ ಚೆಕ್ ಪೋಸ್ಟಗಳು ಇವೆ ಎಂದರೆ ಸಾಕ್ಷಿಯು ಸದರಿ ಸಮಯದಲ್ಲಿ ಯಾವುದೇ ಚೆಕ್ ಪೋಸ್ಟ ಇರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತಳ ಮನೆ ಸದರಿ ಗ್ರಾಮದ ಅರಬಳ್ಳಿ ಓಣಿಯಲ್ಲಿ ಇದೆ. ಸದರಿ ಮನೆ ಸದರಿ ಓಣಿಯಲ್ಲಿ ಇದೆ ಎಂದು ತೋರಿಸಲು ಜಾಗೆಯ ಪಂಚನಾಮೆ ಮತ್ತು ಉತಾರನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ತನಿಖಾಧಿಕಾರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ 2 ರವರು ಬೆಳಗಾವಿಯ ರಹವಾಸಿ ಎಂದರೆ ಸಾಕ್ಷಿಯು ನಮ್ಮ ಸಿಬ್ಬಂದಿಗಳು ಕಡೆದುಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ.

ನಿ ಪಿ 1 ನ್ನು ಜರುಗಿಸುವ ಸಮಯದಲ್ಲಿ ಕರಡಿಗುದ್ದಿ ಗ್ರಾಮದ ಸ್ಥಳೀಯರನ್ನು ಪಂಚರನ್ನಾಗಿ ಹಾಜರುಪಡಿಸಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಾನು ಕೇಳಿರುತ್ತೇನೆ ಆದರೆ ಅವರು ಒಪ್ಪಿಕೊಳ್ಳಲಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನ ರಾತ್ರಿ 08.15 ರಿಂದ 08.30 ರವರೆಗೆ ಸ್ಥಳೀಯರನ್ನು ಪಂಚರಾಗಲು ಕೇಳಿಕೊಂಡಿರುತ್ತೇನೆ. ಸದಾಶಿವ ನಗರದಲ್ಲಿ ಚಾಸಾ 2 ರವರ ಹೆಸರಿನ ಮೇಲೆ ಎಮ್ ಎಸ್ ಐ ಎಲ್ ಸಾರಾಯಿ ಅಂಗಡಿ ಇದೆ ಎಂದರೆ ಸಾಕ್ಷಿಯು ಎಮ್ ಎಸ್ ಐ ಎಲ್ ಸರ್ಕಾರದ್ದು ಇದ್ದು, ಯಾವುದೇ ಖಾಸಗಿ ವ್ಯಕ್ತಿಗಳ ಹೆಸರಿನ ಮೇಲೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ 2 ಮತ್ತು 3 ರವರು ಸದರಿ ಅಂಗಡಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತಳ ಮನೆಯ ಅಕ್ಕ ಪಕ್ಕ ಶಿಕ್ಷಕರು ಮತ್ತು ವಕೀಲರು ವಾಸಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ 2 ಮತ್ತು 3 ರವರನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸಾಕ್ಷಿದಾರರನ್ನಾಗಿ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ದಾಳಿ ಮಾಡಿದ ಸಮಯದಲ್ಲಿ ಆರೋಪಿತಳ ಮನೆಯಲ್ಲಿ ಯಾರು ಇರಲಿಲ್ಲ. ನಾನು ದಾಳಿ ಮಾಡಿದ ಸಮಯದಲ್ಲಿ ಸದರಿ ಮನೆಯ ಉತಾರ ಸಿಕ್ಕಿರುವುದಿಲ್ಲ.

ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ದಿನಾಂಕ 09-06-2022 ರಂದು ನಾನು ಆರೋಪಿತಳ ಮನೆಯನ್ನು ದಾಳಿ ಮಾಡಿದಾಗ ಸದರಿ ಮನೆಯಲ್ಲಿರುವ ಎರಡನೇ ಕೋಣೆಯಲ್ಲಿ ಕಳ್ಳ ಭಟ್ಟಿ ಸಾರಾಯಿ ತುಂಬಿದ ರಬ್ಬರ ಟ್ಯೂಬ ಸಿಕ್ಕಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು ಮಾ 1 ಇದು ಪ್ಲಾಸ್ಟೀಕ ಬಾಟಲಿ ಇದ್ದು ಎಲ್ಲ ವಾಹನಗಳಲ್ಲಿ ಸಾಮಾನ್ಯವಾಗಿ ಖಾಲಿ ಬಾಟಲಿ ಸಿಗುತ್ತದೆ ಎಂದರೆ ಸರಿ. ಪ್ರಕರಣಕ್ಕೆ ಅನುಕೂಲವಾಗುವಂತೆ ಬೇಕು ಅಂತಾ ಮು ಮಾ 1 ನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಮತ್ತು ಮುದ್ದೆ ಮಾಲುಗಳನ್ನು ಜಪ್ತಿ ಮಾಡಿಕೊಂಡಿಲ್ಲ ಅಂದರೆ ಸರಿಯಲ್ಲ. ನಾನು ಹೇಳಿದ ಸ್ಥಳದಲ್ಲಿ ದಾಳಿ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಅದೂ ಠಾಣೆಯಲ್ಲಿ ತಯಾರಿಸಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿತಳಿಗೂ ಮತ್ತು ಮು. ಮಾ.

**1**ಕ್ಕೂ  ಯಾವುದೇ ಸಂಬಂಧ ಇಲ್ಲ  ಆದರೂ ಸುಳ್ಳು ದೂರನ್ನು ದಾಖಲು ಮಾಡಿ**,** ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ**.**

**ಮರು ವಿಚಾರಣೆಃ  ಇಲ್ಲಾ   .**

( ನನ್ನ ಉಕ್ತಲೇಖನದಂತೆ ತೆರೆದ  ನ್ಯಾಯಾಲಯದಲ್ಲಿ  ಗಣಕೀಕರಿಸಲಾಯಿತು ) .

**ಓ.ಹೇ.ಕೇ.ಸರಿ.ಇದೆ.**

ಸಹಿ/-

**3 ನೇ ಪ್ರ.ದ.ನ್ಯಾ .ದಂ.ಗಳು,ಬೆಳಗಾವಿ**